**3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 699/2019</u>**

ದಿನಾಂಕಃ **16-09-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಸೋಮಶೇಖರಪ್ಪ | ಚಾಸಾ-14, ಪ್ರಾಸ-9 |
| ಗಂಡನ ಹೆಸರು ಃ | ರುದ್ರಪ್ಪ | |
| ವಯಸ್ಸು ಃ | 66 ವರ್ಷ | |
| ಉದ್ಯೋಗ ಃ | ನಿವೃತ್ತ ಪಿ ಎಸ್ ಐ | |
| ವಾಸ ಃ | ಅಜ್ಜಂಪುರ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು 2012 ರಿಂದ 2017 ರವರೆಗೆ  ಬೀರೂರು ಠಾಣೆಯಲ್ಲಿ ಆರಕ್ಷಕ ಉಪ ನೀರಿಕ್ಷಕನಾಗಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 23.06.2017 ರಂದು ಸಂಜೆ 6.00 ಗಂಟೆ ಸಮಯದಲ್ಲಿ  ನಾನು ಠಾಣಾ ಪ್ರಭಾರೆಯಲ್ಲಿದ್ದಾಗ ಚಾಸಾ-1 ರವರು ನಿಪಿ-2 ರಂತೆ ನೀಡಿರುವ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 112ಃ2017 ರಂತೆ ಪ್ರಕರಣ ದಾಖಲಿಸಿರುತ್ತೇನೆ.  ಸಾಕ್ಷಿ ನಿಪಿ-2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.  ಪ್ರವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು, ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.   ಅದೇ ದಿನ ಸಂಜೆ 5.00 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ-9 ಮತ್ತು 10 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-3 ರಂತೆ ಮಹಜರನ್ನು ಜರುಗಿಸಿ ಕಚ್ಚಾ ನಕ್ಷೆ ತಯಾರಿಸಿರುತ್ತೇನೆ.  ಅದೇ ಸಮಯದಲ್ಲಿ ನಿಪಿ-4 ಮತ್ತು 5 ರಂತೆ ಛಾಯಾಚಿತ್ರ ತೆಗೆಸಿರುತ್ತೇನೆ.  ಸಾಕ್ಷಿ ನಿಪಿ-3 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.  ಅದೇ ಸಮಯದಲ್ಲಿ ಮುಮಾ-1 ಮತ್ತು 2 ನ್ನು ವಶಪಡಿಸಿಕೊಂಡು ಠಾಣಾ ಪಿ ಎಫ್ ಸಂ 70ಃ2017 ರಂತೆ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ.

ದಿಃ 24.06.2017 ರಂದು ಸಾಕ್ಷಿದಾರರಾದ ಚಾಸಾ-3 ರಿಂದ 8 ರವರ ಹೇಳಿಕೆಯನ್ನು ನಿಪಿ-6 ರಿಂದ 8 ರಂತೆ ದಾಖಲಿಸಿರುತ್ತೇನೆ.    ಚಾಸಾ-2 ರವರ 2 ಗಾಯದ ಪ್ರಮಾಣಪತ್ರವನ್ನು ಚಾಸಾ-11 ಮತ್ತು 12 ರವರಿಂದ ಪಡೆದಿರುತ್ತೇನೆ.  ಸಾಕ್ಷಿಯು ದಿಃ 20.09.2017 ರಂದು ಚಾಸಾ-12 ರವರು ನೀಡಿರುವ ಚಾಸಾ-2 ರವರ ಗಾಯದ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಎಂದು, ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.  ಚಾಸಾ-13 ರವರು ನೀಡಿದ ಗಾಯದ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.  ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ.   ನ್ಯಾಯಾಲಯದ ಮುಂದಿರುವ ಮುಮಾ-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

পাটೀಸವಾಲುಃ **2** ನೇ ಆರೋಪಿ ಪರ ಶ್ರೀ. ಎಂ ಬಿ ವಕೀಲರಿಂದಃ

ಈ ಕೇಸಿನ ಪಿರ್ಯಾದುದಾರರು ಸಂಜೆ 6.00 ಗಂಟೆಗೆ ಠಾಣೆಗೆ ಹಾಜರಾಗಿರುತ್ತಾರೆ. ನಿಪಿ-2 ರ ದೂರಿನಲ್ಲಿರುವ ಒಕ್ಕಣೆಗೂ ಪಿರ್ಯಾದಿಯ ಸಹಿಯ ಅಕ್ಷರಕ್ಕೂ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ-2 ರ ದೂರನ್ನು ನಾನೇ ಬರೆದು ಚಾಸಾ-1 ರವರ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶದ ಸಲುವಾಗಿ ನಿಪಿ-2 ನ್ನು ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಕಚ್ಚಾ ನಕ್ಷೆಯಲ್ಲಿ ಹೇಳಿರುವ ತಿಮ್ಮಣ್ಣ ನವರ ತಂದೆ ಹೆಸರನ್ನು ನಾನು ನಮೂದು ಮಾಡಿರುವುದಿಲ್ಲ. ನಾನು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಹಿರೇನಲ್ಲೂರು ಕೆದಿಗೆರೆ ರಸ್ತೆ ಬರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ಚಕ್ಕುಬಂಧಿ ಪೂರ್ವಕ್ಕೆ ಃ ಕೆದಿಗೆರೆಯಿಂದ ಹಿರೇನಲ್ಲೂರು ರಸ್ತೆ. ನಾನು ಮಹಜರನ್ನು ಜರುಗಿಸದ ಕಾರಣ ಕೃತ್ಯ ನಡೆದ ಸ್ಥಳದ ಚಕ್ಕುಬಂಧಿ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ಮತ್ತು 5 ರ ಛಾಯಾಚಿತ್ರವನ್ನು ಯಾವ ಸ್ಥಳದಲ್ಲಿ ತೆಗೆಸಿರುತ್ತೇನೆ ಎಂದು ನಮೂದಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ-4 ಮತ್ತು 5 ನ್ನು ಈ ಪ್ರಕರಣದ ಸಲುವಾಗಿ ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ದಾಖಲಿಸಿರುದಿಲ್ಲ ಎಂದರೆ ಸರಿಯಲ್ಲ. ಮುಮಾ-1 ಮತ್ತು 2 ಸಾಮಾನ್ಯವಾಗಿ ಎಲ್ಲಾ ಸ್ಥಳದಲ್ಲಿ ದೊರೆಯುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದ ಸಲುವಾಗಿ ಮುಮಾ-1 ಮತ್ತು 2 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವೈದ್ಯಕೀಯ ಪ್ರಮಾಣಪತ್ರವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯಿಂದ ಆರೋಪಿತರ ಯಾವುದೇ ತಪ್ಪು ಕಂಡುಬಾರದಿದ್ದರೂ ಸಹ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**1** ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ**.**

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಃದಃನ್ಯಾಃದಂ.,ರವರು, ಕಡೂರು.